ರಾಣಿ ಮತ್ತು ಮಗನ ಜತೆ ಕೂತು ಸಾಮಂತರಿಂದ ಮುಜುರೆ, ಮುಯ್ಯಿ ಸ್ವೀಕರಿಸುವ ಆಸ್ಥಾನದ ಸೀನು. 'ಎಂತು ರಂಜಿಪರು ದಂಪತಿಗಳಿವರು, ಎಂತು ರಂಜಿಪರು...' ಅನ್ನೋ ಹಾಡನ್ನು ಎತ್ತರದ ಸ್ಥಾಯಿಯಲ್ಲಿ ಹಾರ್ಮೋನಿಯಂ ನುಡಿಸಿಕೊಂಡು ಮೇಷ್ಟ್ರು ಹಾಡಿದರು. ಮೇಷ್ಟ್ರು ಈ ವಯಸ್ಸಲ್ಲೂ ಎಷ್ಟು ಚೆನ್ನಾಗಿ ಹಾಡ್ತಾರೆ ಅಂತ ಎಲ್ಲರಿಗೂ ಅಚ್ಚರಿ. ಮರು ದಿನದಿಂದ ಪ್ರಾಕ್ಟೀಸು ಶುರುವಾಯಿತು. ಸಂಜೆಯಾಗುತ್ತಿದ್ದಂತೆ ಊರಿನ ನಾಟಕಾಸಕ್ತರಿಗೆ ಏನೋ ಸಂಭ್ರಮ. ಹಾರ್ಮೋನಿಯಂ ಸದ್ದು ಕೇಳಿದರೆ ಸಾಕು ಎಲ್ಲರ ಕಿವಿಗಳು ಚುರುಕಾಗುತ್ತಿದ್ದವು. ಅನೇಕರು ಪ್ರಾಕ್ಟೀಸು ಮನೆ ಹತ್ರ ಹೋಗಿ ಬಾಗಿಲು, ಕಿಟಕಿಗಳಲ್ಲಿ ಕಿವಿಕೊಟ್ಟು ನಿಲ್ಲುತ್ತಿದ್ದರು.

ಬಾಬಣ್ಣ, ಪಾವಗಡದಿಂದ ಸ್ವಾಮಿಯ ಆರಡಿ ಎತ್ತರದ ಪೋಸ್ಟರ್ ತರಿಸಿದ. ಅದಕ್ಕೆ ಫ್ರೇಮು ಹಾಕಿಸಿ ಬಸ್ ಸ್ಟಾಂಡಿನಲ್ಲಿದ್ದ ಅರಳಿಮರಕ್ಕೆ ಒರಗಿಸಿ ನಿಲ್ಲಿಸಿದ. ಅದರ ಮುಂದೆ ದೊಡ್ಡ ಹುಂಡಿ ತಂದಿಟ್ಟ. ಊರಿಗೆ ಬಂದು ಹೋಗುವ ಬಸ್ಸುಗಳು ಅಲ್ಲಿ ಐದು ನಿಮಿಷ ನಿಲ್ಲುವ ವ್ಯವಸ್ಥೆ ಮಾಡಿದ. ಬಸ್ಸುಗಳಲ್ಲಿ ಬಂದ ಜನ ಇಳಿದು ಜೇಬಲ್ಲಿದ್ದ ಸ್ವಲ್ಪ ಹಣವನ್ನು ಹುಂಡಿಗೆ ಹಾಕಿ ಸ್ವಾಮಿಯ ಪಟಕ್ಕೆ ಕೈಮುಗಿದು ಹೋಗುತ್ತಿದ್ದರು. ಎರಡೇ ತಿಂಗಳಲ್ಲಿ ಒಂದೂವರೆ ಲಕ್ಷ ರುಪಾಯಿ ಹುಂಡಿಗೆ ಬಿತ್ತು. ಹುಂಡಿಗೆ ಬಿದ್ದಿದ್ದು ಮೂರು ಲಕ್ಷವಂತೆ. ಅರ್ಧದಷ್ಟು ಬಾಬಣ್ಣನ ಹುಂಡಿ ಸೇರಿದೆ ಅಂತ ಕೆಲವರು ಸುದ್ದಿ ಹಬ್ಬಿಸಿದರು.

'ಎಂತು ರಂಜಿಪರು...' ಅನ್ನೋ ಹಾಡಿದೆಯಲ್ಲ, ಅದು ಕೃಷ್ಣಲೀಲಾ ನಾಟಕದ್ದಂತೆ. ವಸುದೇವ, ದೇವಕಿಯರ ಆಸ್ಥಾನದಲ್ಲಿ ಹಾಡೋದಂತೆ! ಮೈಸೂರು ಕಡೆ ಈಗಲೂ ಅದು ಫೇಮಸ್ಸು ಅಂತ ನಮ್ಮ ಜೂನಿಯರ್ ಕಾಲೇಜಿನ ಕನ್ನಡ ಮೇಷ್ಟ್ರು ಹೇಳಿದರು. ಅವರದು ಚಾಮರಾಜನಗರ. ಶೃಂಗಾರ ಸಮಯವಿದು ಬಾ ಬಾ... ಅಂತ ವಿಕ್ರಮರಾಜ, ಕಾಮಿನಿಗೆ ಹಾಕಿರೋ ಹಾಡಿನದು ಕೊಂಜುಂಸಲಂಗೈ ಅನ್ನೋ ತಮಿಳು ಸಿನಿಮಾದ ಟ್ಯೂನಂತೆ. ಮಸ್ಕಲ್ ಕಂದಸಾಮಿ ಹೇಳ್ದ. ರಾಮಣ್ಣ ಮೇಷ್ಟ್ರು ಎರಡೂ ಹಾಡುಗಳನ್ನು ಕದ್ದು ಬಳಸಿಕೊಂಡಿದ್ದಾರೆ. ಅವರು ಆಡಿಸ್ತಿರೊ ನಾಟಕ, ರಾಜಾ ಸತ್ಯವ್ರತ ಅನ್ನೋ ಕನ್ನಡ ಸಿನಿಮಾದ ಜೆರಾಕ್ಸು. ಅದು ಐವತ್ತೆರಡರಲ್ಲಿ ಬಂದಿತ್ತು. ಕೆಂಪರಾಜ ಅರಸು ಅನ್ನೋರು ಅದರ ಹೀರೊ. ಅದು ಯೂಟ್ಯೂಬಿನಲ್ಲಿದೆ ಬೇಕಾದರೆ ನೋಡಿ ಅಂತ ಸೀನ ಎಲ್ಲರಿಗೂ ಹೇಳತೊಡಗಿದ.

***

ಡಿಸೆಂಬರ್ ಹತ್ತನೆ ತಾರೀಕು ನಾಟಕ ಅಂತ ನಿರ್ಧಾರವಾಯಿತು. ಆರನೇ ತಾರೀಕು ಲೇಡಿ ಆರ್ಟಿಸ್ಟ್‌ಗಳು ಬರ್ತಾರೆ. ಅವರು ಪ್ರಾಕ್ಟೀಸು ಮನೆಯ ಕಾಂಪೌಂಡಿನಲ್ಲಿರೊ ಬಾಬಣ್ಣನ ಗೆಸ್ಟ್‌ಹೌಸಲ್ಲಿ ಇರ್ತಾರಂತೆ ಅಂತ ಸುದ್ದಿಯಾಯಿತು. ಆರನೇ ತಾರೀಕು ಮುಸ್ಸಂಜೆ ಹೊತ್ತಲ್ಲಿ ಬಿಳಿ ಕಾರೊಂದು ಊರೊಳಕ್ಕೆ ಬಂತು. ನಾಟಕದ ಹೆಂಗಸರು ಕಾರಿನಲ್ಲಿ ಬಂದದ್ದು ನೋಡಿ ಊರವರಿಗೆ ಆಶ್ಚರ್ಯ. ಐಶ್ವರ್ಯ, ನೋಡಕೆ ಥೇಟ್ ಕೀರ್ತಿ ಸುರೇಶ್ ತರಾನೆ ಇದಾಳೆ ಅಂತ ನೋಡಿ ಬಂದವನೊಬ್ಬ ಎಲ್ಲರಿಗೂ ಹೇಳಿ ಪಾಂಪ್ಲೆಟ್‌ನಲ್ಲಿ ಬೇರೆ ಥರಾ ಇದ್ದಾಳೆ ಅಂದ. ಕುತೂಹಲಿಗಳು ಸೀನನನ್ನು ಹುಡುಕಿಕೊಂಡು ಹೋಗಿ ಕೀರ್ತಿ ಸುರೇಶ್ ಯಾರು ಅಂತ ಕೇಳಿದರು. ಅವನು ತನ್ನ ಮೊಬೈಲ್‌ನ ಬಟನ್‌ಗಳನ್ನು ಒತ್ತಿ ನಟಿ ಕೀರ್ತಿ ಸುರೇಶ್ ಫೋಟೊ ತೆಗೆದು ತೋರಿಸಿದ. ಮಸ್ತಾಗಿದ್ದಾಳೆ ಅಂತ ಎಲ್ಲರಿಗೂ ಅನ್ನಿಸಿತು.

ರಿಹರ್ಸಲ್ ನೋಡಬೇಕು ಅಂದುಕೊಂಡಿದ್ದ ಊರ ಹುಡುಗರಿಗೆ ನಿರಾಸೆಯಾಯಿತು. ಪಾತ್ರಧಾರಿಗಳನ್ನು ಬಿಟ್ಟು ಬೇರೆ ಯಾರಿಗೂ ಪ್ರಾಕ್ಟೀಸು ಮನೆಯ ಕಾಂಪೌಂಡಿನೊಳಕ್ಕೆ ಎಂಟ್ರಿ ಸಿಗಲಿಲ್ಲ. ಮಹಾರಾಣಿ, ಕಾಮಿನಿ, ಪದ್ಮಿನಿಯರ ಪಾತ್ರ ಮಾಡೋಕೆ ಬಂದಿರೊ ಹೆಂಗಸರು ನೀರು ಕುಡಿದಷ್ಟು ಸಲೀಸಾಗಿ ಆಕ್ಟ್ ಮಾಡ್ತಾರಂತೆ. ನಮ್ಮ ಸುರೇಶನೇ ವೀಕು. ಅವರ ಮೈ, ಕೈ ಮುಟ್ಟೋಕೆ ಹಿಂದೆಮುಂದೆ ನೋಡ್ತಾನಂತೆ! ಆಗ ಅವರೇ ಹಂಗಲ್ಲ, ಹಿಂಗೆ ಅಂತ ಅವನ ಮೈ,ಕೈಮುಟ್ಟಿ ಅಭಿನಯಿಸಿ ತೋರಿಸ್ತಾರಂತೆ ಅಂತ ಪಾತ್ರಧಾರಿಯೊಬ್ಬ ಹೇಳಿದ್ದನ್ನು ಎಲ್ಲರೂ ಬಾಯಿ ಬಿಟ್ಟುಕೊಂಡು ಕೇಳಿದ್ದರು. ಊರಿನ ಕೆಲವು ಪ್ರಾಯದ ಹುಡುಗರು ಹೊಲ, ಮನೆಯ ಕೆಲಸಗಳನ್ನು ಮರೆತು ಇಡೀ ದಿನ ಪ್ರಾಕ್ಟೀಸು ಮನೆಯ ಕಾಂಪೌಂಡಿನ ಹೊರಗೇ ನಿಂತು ನಾಟಕದ ಲೇಡೀಸ್ ಹೊರಕ್ಕೆ ಬರ್ತಾರೇನೋ ಅಂತ ಕಾಯ ತೊಡಗಿದರು.